ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕ್ರ.ಸಂ. ಸಿಬಿಎನ್/ಲೆಪಶಾ/ಎಬಿ-2/2025-26/ 09776

ಮುಖ್ಯ ಇಂಜಿನೀಯರರ ಕಛೇರಿ,
ಸಂಪರ್ಕ ಮತ್ತು ಕಟ್ಟಡಗಳು (ಉತ್ತರ),
ಸರ್ ಎಂ. ವಿಶ್ವೇಶ್ವರಯ್ಯ ಮಾರ್ಗ,
ಧಾರವಾಡ.

ದಿನಾಂಕ : 7 FEB 2026

ಸರ್ಕಾರದ ಪತ್ರ ಸಂಖ್ಯೆ. ಲೋಇ 839 ಐಎಫ್ಎ 2025 (ಇ-ಕಛೇರಿ) ಬೆಂಗಳೂರು ದಿನಾಂಕ : 05.02.2026 ರ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕೆಳಕಾಣಿಸಿದವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಅಧೀಕ್ಷಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವೃತ್ತ, ಬೆಳಗಾವಿ.
2. ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಬೆಳಗಾವಿ.
3. ಅಧೀಕ್ಷಕ ಇಂಜಿನೀಯರರು (ವಿನ್ಯಾಸ) ಕೇಂದ್ರ ಕಛೇರಿ, ಧಾರವಾಡ.
4. ತಾಂತ್ರಿಕ ಸಹಾಯಕರು - 1 ಕೇಂದ್ರ ಕಛೇರಿ, ಧಾರವಾಡ.

ಕ.ಪ್ರ. ಮು.ಇಂ. ರಿಂದ ಅನುಮೋದಿತವಾಗಿದೆ.

ಮುಖ್ಯ ಇಂಜಿನೀಯರ ಪರವಾಗಿ,
ಸಂಪರ್ಕ ಮತ್ತು ಕಟ್ಟಡಗಳು (ಉತ್ತರ),
ಧಾರವಾಡ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **ಖಾನಾಪೂರ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಬರುವ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಸೇತುವೆ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ಲೋಇ 434 ಸಿಆರ್‌ಎಂ:2025 (ಇ) ದಿನಾಂಕ 27-11-2025
2. ಕಂಡಿಕೆ 29ರಲ್ಲಿ ಅನುಮೋದನೆ

5312 ದಿನಾಂಕ 7/2/26

**ಪ್ರಸ್ತಾವನೆ**

2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಸೇತುವೆಗಳ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ರೂ.1000.00ಕೋಟಿ ಅನುದಾನವನ್ನು ಒದಗಿಸಲಾಗಿದೆ. ಆ ಮೊತ್ತದಲ್ಲಿ PRAMC ಅಧ್ಯಯನದಲ್ಲಿ ಗುರುತಿಸಿರುವ 39 ಬೃಹತ್ ಸೇತುವೆಗಳ ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಜೊತೆಗೆ ಇನ್ನು ಹೆಚ್ಚುವರಿಯಾಗಿ **ರೂ. 1000.00ಕೋಟಿ** ಅಂದಾಜು ಮೊತ್ತದಲ್ಲಿ ಅತೀ ಅವಶ್ಯವಿರುವ ಇತರೆ ಸಣ್ಣ ಸೇತುವೆಗಳ ಪುನರ್ ನಿರ್ಮಾಣ / ಪುನಶ್ಚೇತನ, ಅತೀವೃಷ್ಟಿಯಿಂದ ಹಾನಿಗೊಳಗಾದ ಸೇತುವೆಗಳ ದುರಸ್ತಿ ಪುನರ್ ನಿರ್ಮಾಣ ಮತ್ತು ಮಲೆನಾಡು ಹಾಗೂ ಕರಾವಳಿ ಭಾಗಗಳಲ್ಲಿ ಸಂಪರ್ಕ ರಹಿತ ಜನವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಕಾಲುಸಂಕಗಳ ನಿರ್ಮಾಣವನ್ನು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ಅದರಂತೆ ಒಟ್ಟಾರೆಯಾಗಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸೇತುವೆಗಳ ದುರಸ್ತಿ, ಪುನರ್ ನಿರ್ಮಾಣ ಮತ್ತು ಪುನಶ್ಚೇತನ ಕಾಮಗಾರಿಗಳನ್ನು **ರೂ.2000.00ಕೋಟಿ** ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಮೇಲೆ ಓದಲಾದ (1)ರ ಆದೇಶದಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ **ಖಾನಾಪೂರ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮೇಲೆ ಓದಲಾದ (2)ರ ಅನುಮೋದನೆಯಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ: ಲೋಇ:839:ಐಎಫ್ಎ:2025 (ಇ-ಕಛೇರಿ) ಬೆಂಗಳೂರು, ದಿನಾಂಕ:05-02-2026**

**ಖಾನಾಪೂರ ವಿಧಾನಸಭಾ ಕ್ಷೇತ್ರ** ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸೇತುವೆ ಕಾಮಗಾರಿಯನ್ನು **ರೂ.2300.00ಲಕ್ಷ** ಅಂದಾಜು ಮೊತ್ತದಲ್ಲಿ ಲೋಕೋಪಯೋಗಿ ವಿಭಾಗದಿಂದ ಕೈಗೆತ್ತಿಕೊಳ್ಳಲು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ. ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| | **ಲೆ.ಶೀ. 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ-ಬಂಡವಾಳ ವೆಚ್ಚ** | |
| 1 | ಬೆಳಗಾವಿ ಜಿಲ್ಲೆಯ ಖಾನಾಪೂರ ಮತಕ್ಷೇತ್ರದ ಸಿಂಧನೂರು-ಹೆಮ್ಮಾಡಗಾ ರಾಜ್ಯ ಹೆದ್ದಾರಿ-30 ಕಿ.ಮೀ 289.10ರಲ್ಲಿ (ಹಾಲಾತ್ರಿ ನಾಲಾಕ್ಕೆ ಅಡ್ಡಲಾಗಿ) ಸೇತುವೆ ನಿರ್ಮಾಣ ಮಾಡುವುದು | 800.00 |
| 2 | ಬೆಳಗಾವಿ ಜಿಲ್ಲೆಯ ಖಾನಾಪೂರ ಮತಕ್ಷೇತ್ರದ ನಾಗರಗಾಳಿ-ಕಟಕೋಳ ರಾಹೆ-138ರ ಕಿ.ಮೀ 40.40ರಲ್ಲಿ (ಪಾರಿಶ್ವಾಡ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ) ಸೇತುವೆ ನಿರ್ಮಾಣ | 1500.00 |
| | **ಒಟ್ಟು** | **2300.00** |

**ಕಾಮಗಾರಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ ಹಾಗೂ ಅನುಷ್ಠಾನಗೊಳಿಸುವಾಗ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.**

1. ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಳ್ಳತಕ್ಕದ್ದು.
2. ಸಹಮತಿಸಲಾದ ಅನುದಾನದ ಮಿತಿಯಲ್ಲಿಯೇ ಕಾಮಗಾರಿಗಳ ಅಂದಾಜನ್ನು ಪ್ರಚಲಿತ ದರಪಟ್ಟಿಯನ್ವಯ ತಯಾರಿಸತಕ್ಕದ್ದು. ಅಂತಹ ಅಂದಾಜಿನಲ್ಲಿ ಸಹಮತಿಸಿದ ಅನುದಾನದ ಮಿತಿಯಲ್ಲಿಯೇ ಟೆಂಡರ್ ಪ್ರೀಮಿಯಂ ಕೂಡ ಒಳಗೊಂಡಿರತಕ್ಕದ್ದು. ಯಾವುದೇ ಕಾರಣಕ್ಕೂ ಅಂದಾಜಿನಲ್ಲಿ ನಿರ್ಣಾಯಕ ಐಟಂಗಳು ಕೈಬಿಟ್ಟು ಹೋಗದಂತೆ ನೋಡಿಕೊಳ್ಳತಕ್ಕದ್ದು.
3. **ಪ್ರಸ್ತಾಪಿಸಿದ** ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

4. ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ ಹಂಚಿಕೆ ಮಾಡಿರುವ ಅನುದಾನದ ಮಿತಿಯಲ್ಲಿಯೇ ಸೇತುವೆ ನಿರ್ಮಾಣ ವೆಚ್ಚ, ಸಂಪರ್ಕ ರಸ್ತೆ ನಿರ್ಮಾಣ ವೆಚ್ಚ ಹಾಗೂ ಭೂಸ್ವಾಧೀನ ವೆಚ್ಚವನ್ನು ಸೇರ್ಪಡೆ ಮಾಡಿ ಅಂದಾಜನ್ನು ಸಿದ್ಧಪಡಿಸತಕ್ಕದ್ದು.

5. ಪ್ರಸ್ತಾಪಿಸಿದ ಕಾಮಗಾರಿಗಳಡಿ ಅಂದಾಜನ್ನು ಪರಿಷ್ಕರಿಸುವುದನ್ನು EIRL ಹಾಗೂ ವರ್ಕ್‌ಸ್ಲಿಪ್ ಸಿದ್ಧಪಡಿಸುವುದನ್ನು ನಿರ್ಬಂಧಿಸಿದೆ.

6. ಆಡಳಿತಾತ್ಮಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರವು 15 ದಿನಗಳೊಳಗಾಗಿ ನೀಡತಕ್ಕದ್ದು.

7. ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಹಾಗೂ ಸರ್ಕಾರದ ಅಧಿಸೂಚನೆ ಸಂ.ಸಿಆಸುಇ 2 ಇಸಂಗ್ರ 2009, ದಿನಾಂಕ 09-10-2012ರ ಪ್ರಕಾರ ಟೆಂಡರ್ ಕರೆದು ನಿರ್ವಹಣೆಗೆ ಕ್ರಮವಹಿಸತಕ್ಕದ್ದು ಹಾಗೂ ಸರ್ಕಾರದ ಸುತ್ತೋಲೆ ಸಂ.ಲೋಇ/07/ಐಎಫ್‌ಎ/2013 ದಿನಾಂಕ 16-01-2013ರ ಪ್ರಕಾರ ನಿರ್ವಹಿಸತಕ್ಕದ್ದು.

8. ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರದ ಆದೇಶ ಸಂ.ಲೋಇ 272 ಆಕೋ-2/2013 ದಿನಾಂಕ 24-04-2013ರಂತೆ ಕ್ರಮವಹಿಸತಕ್ಕದ್ದು.

9. ಸದರಿ ಕಾಮಗಾರಿಗಳು ಸ್ಥಳೀಯ ಸಂಸ್ಥೆಗಳ / ಇತರೆ ಇಲಾಖೆಗಳ ಕ್ರಿಯಾ ಯೋಜನೆಗಳಲ್ಲಿ, ಇತರೆ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಲ್ಲಿ ಹಾಗೂ ಈ ಹಿಂದಿನ ಅಪೆಂಡಿಕ್ಸ್-ಇ ಅಡಿ ಅಭಿವೃದ್ಧಿಪಡಿಸಲಾಗದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

10. ಕಾಮಗಾರಿಗಳು ಮುಕ್ತಾಯಗೊಂಡ ನಂತರ ಬಿ.ಆರ್.ಸಂಖ್ಯೆ ಮತ್ತು ದಿನಾಂಕ ವಿವರಗಳೊಂದಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಿದ ನಂತರವೇ ಹಣ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 09-10-2025ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂ.ಸಿ.836/2025ರಲ್ಲಿ ತೆಗೆದುಕೊಂಡ ತಿರ್ಮಾನದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಸೋಮನಾಥ)**
ಆಂತರಿಕ ಆರ್ಥಿಕ ಸಲಹೆಗಾರರು
ಲೋಕೋಪಯೋಗಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ನ್ಯೂ ಬಿಲ್ಡಿಂಗ್, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು,(ವೆಚ್ಚ) ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನಸೌಧ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಲೋಕೋಪಯೋಗಿ (ಆರ್ಥಿಕ ಕೋಶ), ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
6. ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
8. ಕಛೇರಿ ಪ್ರತಿ